# ಕೇಂದ್ರೀಯ ಹತ್ತಿ ಸಂಶೋಧನಾ ಸಂಸ್ಥೆ, ನಾಗಪುರ, ಮಹಾರಾಷ್ಟ್ರ

*[ ಭಾರತೀಯ ಕೃಷಿ ಅನುಸಂಧಾನ ಪರಿಷತ್ತು (ಭಾ. ಕೃ. ಅ. ಪ), ಕೃಷಿ ಮಂತ್ರಾಲಯ, ಭಾರತ ಸರ್ಕಾರ ]*

## ಹತ್ತಿ ಬೆಳೆಯ ಸಾಪ್ತಾಹಿಕ ಸಲಹೆ, 05 ರಿಂದ 11 ಡಿಸೆಂಬರ್, 2023 ರ ಅವಧಿಗೆ

*"ಈ ಸಲಹೆಯು ಆಯಾ ರಾಜ್ಯಗಳ ರಾಜ್ಯ ಕೃಷಿ ವಿಶ್ವವಿದ್ಯಾಲಯಗಳಿಂದ ಸ್ವೀಕರಿಸಿದ ಮಾಹಿತಿಯನ್ನು ಆಧರಿಸಿದೆ"*



| ಕರ್ನಾಟಕ | | IMDಯ ಪ್ರಕಾರ ಮುನ್ಸೂಚನೆಯ ಮಳೆ (ಮಿ.ಮೀ) | | | | | | | | | |
|---|---|---|---|---|---|---|---|---|---|---|---|
| | | ಕಳೆದ ವಾರದಲ್ಲಿ ಬಿದ್ದ ಮಳೆ | | | | | ಮುಂದಿನ ವಾರದಲ್ಲಿ ಮುನ್ಸೂಚಿತ ಮಳೆ | | | | |
| | ದಿನಾಂಕ | 01 | 02 | 03 | 04 | 05 | 07 | 08 | 09 | 10 | 11 |
| | ಧಾರವಾಡ | 0 | 0 | 0 | 0 | 0 | 3 | 0 | 0 | 0 | 0 |
| | ಹಾವೇರಿ | 0 | 0 | 0 | 0 | 0 | 6 | 0 | 0 | 0 | 0 |
| | ಮೈಸೂರು | 0 | 0 | 0 | 0 | 0 | 0 | 0 | 0 | 0 | 15 |

| ಮಳೆಯ ಮಾಹಿತಿಯ ಮಾದರಿ | | | | | | ಮಳೆಯ ಮಾಹಿತಿಯ ಮೂಲ: |
|---|---|---|---|---|---|---|
| ಮಳೆಯ ಪ್ರಮಾಣ (ಮಿ.ಮೀ) | < 2.5 | 2.5-15.5 | 15.6-64.4 | 64.5-115.5 | 115.6 – 204.4 | http://nwp.imd.gov.in/bias/dist_fcst.htm |

ಧಾರವಾಡದಲ್ಲಿ ಬಿತ್ತಿದ ಹತ್ತಿಯು ಕಾಯಿ ರಚನೆಯ/ಕಾಯಿ ಅಭಿವೃದ್ಧಿ ಹಂತದಲ್ಲಿದೆ. ಜಿಗಿ ಹುಳುವಿನ ಬಾಧೆಯು ಮಧ್ಯಮದಿಂದ ತೀವ್ರ ಸ್ಥಿತಿಯಲ್ಲಿದ್ದು, ಸಸ್ಯ ಹೇನುಗಳು ಮಧ್ಯಮ ಸ್ಥಿತಿಯಲ್ಲಿದೆ ಮತ್ತು ಮಿರಿಡ್ ತಿಗಣೆ ಬಾಧೆಯು ಕಡಿಮೆಯಿಂದ ಮಧ್ಯಮ ಸ್ಥಿತಿಯಲ್ಲಿವೆ. ಕೆಲವು ಜಿಲ್ಲೆಗಳಲ್ಲಿ ಗುಲಾಬಿ ಕಾಯಿ ಕೊರಕದ ಬಾಧೆ ಆರ್ಥಿಕ ಗರಿಷ್ಠ ಮಟ್ಟಕ್ಕಿಂತ ಜಾಸ್ತಿ ಕಂಡುಬಂದಿದೆ. ಆಲ್ಟರ್ನೇರಿಯಾ ಎಲೆ ಅಂಗಮಾರಿ ರೋಗ ಮತ್ತು ಬೂದು ಶಿಲೀಂಧ್ರ (ಮಜ್ಜಿಗೆ ರೋಗ) ಸಹ ಮಧ್ಯಮ ಸ್ಥಿತಿಯಲ್ಲಿ ಕಂಡುಬಂದಿದೆ.

ರಾಯಚೂರಿನಲ್ಲಿ, ಬಿತ್ತಿದ ದಿನಾಂಕಗಳ ಆಧಾರದ ಮೇಲೆ ಬೆಳೆಯು ಕಾಯಿ ಅಭಿವೃದ್ಧಿ / ಕಾಯಿ ಒಡೆಯುವ ಹಂತದಲ್ಲಿದೆ. ತಡವಾಗಿ ಬಿತ್ತಿದ ಬೆಳೆಯಲ್ಲಿ ಗುಲಾಬಿ ಕಾಯಿ ಕೊರಕದ ಬಾಧೆಯು ದಾಖಲಾಗಿದೆ. ಕೆಲವು ಕ್ಷೇತ್ರಗಳಲ್ಲಿ ಎಲೆ ಕೆಂಪಾಗುವ ಸಮಸ್ಯೆಯೂ ಕಂಡುಬಂದಿದೆ.

ಚಾಮರಾಜನಗರದಲ್ಲಿ ಹತ್ತಿ ಬಿಡಿಸುವ ಕಾರ್ಯ ಪೂರ್ಣಗೊಂಡಿದೆ.

## ಸಲಹೆ

ಧಾರವಾಡದಲ್ಲಿ, ರಸ ಹೀರುವ ಕೀಟಗಳ ಬಾಧೆಯು ಆರ್ಥಿಕ ಗರಿಷ್ಟ ಮಟ್ಟವನ್ನು ದಾಟಿದಲ್ಲಿ ಪ್ರತಿ ಎಕರೆಗೆ ಫ್ಲೋನಿಕಾಮಿಡ್ 50WG@ 80g ಅಥವಾ ಡಯಾಫೆನ್ಥಿಯುರಾನ್ 50WP@ 250g/ಎಕರೆ ಅಥವಾ ಇಮಿಡಾಕ್ಲೋಪ್ರಿಡ್ 17.8SL@ 60 ಮಿ.ಲಿ. /ಎಕರೆ ಅಥವಾ ಥಿಯಾಮೆಥಾಕ್ಸಮ್ 25%WG @ 40g/ ಎಕರೆಗೆ ನೀರಿನಲ್ಲಿ ಬೆರೆಸಿ ಸಿಂಪಡಿಸಲು ರೈತರಿಗೆ ಸಲಹೆ ನೀಡಲಾಗಿದೆ. ಗುಲಾಬಿ ಕಾಯಿ ಕೊರಕವು ಆರ್ಥಿಕ ಗರಿಷ್ಠ ಮಟ್ಟವನ್ನು ದಾಟಿದರೆ, ಪ್ರೊಫೆನೊಫಾಸ್ 50ಇಸಿ @ 600 ಮಿಲಿ/ಎಕರೆ ಅಥವಾ ಕ್ಲೋರ್‌ಪೈರಿಫಾಸ್ 20ಇಸಿ @ 500ಮಿಲಿ ಅಥವಾ ಕ್ವಿನಾಲ್ಫಾಸ್ 20ಎಎಫ್@ 400ಮಿಲಿ/ಎಕರೆ ಅಥವಾ ಎಮಾಮೆಕ್ಟಿನ್ ಬೆಂಜೊಯೇಟ್ 5 ಎಸ್ಜಿ@ 100 ಗ್ರಾಂ/ಎಕರೆ ಅಥವಾ ಇಂಡೋಕ್ಸಾಕಾರ್ಬ್ 14.5 SC @ 200ಮಿಲಿ/ಎಕರೆಯಂತೆ ಸಿಂಪಡಿಸಲು ಸೂಚಿಸಲಾಗಿದೆ. ಬೂದು ರೋಗ, ಅಲ್ಟಾರ್ನೇರಿಯಾ ಎಲೆ ಅಂಗಮಾರಿ ರೋಗ ಮತ್ತು ಎಲೆ ಚುಕ್ಕೆ ರೋಗಗಳ ನಿರ್ವಹಣೆಗಾಗಿ ಪ್ರತಿ 10 ಲೀಟರ್ ನೀರಿನಲ್ಲಿ 100 ಗ್ರಾಂ/ಎಕರೆ ಕಾರ್ಬೆಂಡಜಿಮ್ 12%+ ಮ್ಯಾಂಕೋಜೆಬ್ 63% WP@30 ಗ್ರಾಂ ಅಥವಾ ಕಾರ್ಬೆಂಡಾಜಿಮ್ 50WP @4 ಗ್ರಾಂ ಅಥವಾ ಕ್ರೆಸೊಕ್ಸಿಮ್ ಮೀಥೈಲ್ 44.3 SC@10 ml ಅಥವಾ ಪ್ರೊಪಿನೆಬ್ 70 WP@ 25 ಗ್ರಾಂ ಅಥವಾ ಪ್ರೊಪಿಕೊನಜೋಲ್ 25 @ EC@ 10% WPL 20 ಗ್ರಾಂ ಅಥವಾ ಅಜೋಕ್ಸಿಸ್ಟ್ರೋಬಿನ್ 18.2% w/w + ಡೈಫೆನೊಕೊನಜೋಲ್ 11.4% w/w SC @10 ml ಅಥವಾ ಫ್ಲಕ್ಸಾಪೈರಾಕ್ಸಾಡ್ 167 g/l +ಪಿರಾಕ್ಲೊಸ್ಟ್ರೊಬಿನ್ 333 g/l SC @ 6 ml ಅನ್ನು ಬೆರೆಸಿ ಸಿಂಪಡಿಸಬೇಕು. ಹೊಲಗಳಿಂದ ರೋಗಗ್ರಸ್ತ ಕಾಯಿಗಳು ಮತ್ತು ಬೆಳೆ ಅವಶೇಷಗಳನ್ನು ಸಂಗ್ರಹಿಸಿ ನಾಶಪಡಿಸಬೇಕು.

ರಾಯಚೂರಿನಲ್ಲಿ, ಮುಂಚಿತವಾಗಿ ಬಿತ್ತನೆಗೊಂಡ ಬೆಳೆಯಲ್ಲಿ ಕೆಲವೆಡೆ ಹತ್ತಿ ಬಿಡಿಸುವುದು ಪ್ರಾರಂಭವಾಗಿದೆ. ಆಕಸ್ಮಿಕವಾಗಿ ಸುರಿಯುವ ಮಳೆಗೆ ಹತ್ತಿ ಬೆಳೆ ಹಾನಿಯಾಗುವುದನ್ನು ತಪ್ಪಿಸಲು ರೈತರು ಸಮಯಕ್ಕೆ ಸರಿಯಾಗಿ ಹತ್ತಿ ಬಿಡಿಸಲು ಮುಂದಾಗಬೇಕು. ಬಹಳ ತಡವಾಗಿ ಬಿತ್ತಿದ ಬೆಳೆಗೆ ಆದ್ಯತೆಯ ಮೇರೆಗೆ ಕಳೆ ಕಿತ್ತಲು ಮತ್ತು ಅಂತರ ಬೇಸಾಯ ಕಾರ್ಯಾಚರಣೆಗಳನ್ನು ಕೈಗೊಳ್ಳಿ. ರಸ ಹೀರುವ ಕೀಟಗಳಾದ ಥ್ರಿಪ್ಸ್ ನುಸಿ ಮತ್ತು ಜಿಗಿ ಹುಳುಗಳ ನಿಯಂತ್ರಣಕ್ಕಾಗಿ ಕ್ರಮವಾಗಿ ಥಿಯಾಮೆಥಾಕ್ಸಾಮ್ / ಫಿಪ್ರೊನಿಲ್ ಮತ್ತು ಫ್ಲೋನಿಕಾಮಿಡ್ / ಡೈನೋಟ್ಯುರಾನ್ ಸಿಂಪಡಿಸಿ. ಕೀಟಗಳ ಬಾಧೆಯ ಮೇಲೆ ನಿಗಾ ವಹಿಸಲು ಪ್ರತಿ ಎಕರೆಗೆ 4 ರಂತೆ ಕೀಟ ಬಲೆಗಳನ್ನು ಉಪಯೋಗಿಸಬೇಕು. ಗುಲಾಬಿ ಕಾಯಿ ಕೊರಕದ ವಿರುದ್ಧ ಮುನ್ನೆಚ್ಚರಿಕೆಯಾಗಿ, 80-85 ದಿನಗಳ ಬೆಳೆಗೆ ಪ್ರೊಫೆನೊಫಾಸ್ ಸಿಂಪಡಿಸಿ, ಇದು ಅಂಡಾಣು ಕೀಟನಾಶಕವಾಗಿ ಕಾರ್ಯನಿರ್ವಹಿಸುತ್ತದೆ. ಮೋಹಕ (ಲಿಂಗಾಕರ್ಷಕ) ಬಲೆಗಳಲ್ಲಿ ಸಿಕ್ಕಿಬಿದ್ದ ಗುಲಾಬಿ ಕಾಯಿ ಕೊರಕ ಹುಳುಗಳ ಸಂಖ್ಯೆ ಹೆಚ್ಚುತ್ತಿರುವ ಕಾರಣ, ಗುಲಾಬಿ ಕಾಯಿ ಕೊರಕದ ವಿರುದ್ಧ ಲ್ಯಾಮ್ಡಾ + ಕ್ಲೋರಂಟ್ರಿನಿಪ್ರೋಲ್ (ಸಂಯೋಜಿತ ಉತ್ಪನ್ನ) ಜೊತೆಗೆ ಸೂಕ್ಷ್ಮ ಪೋಷಕಾಂಶಗಳನ್ನು ಒಂದು ಲೀಟರ್ ನೀರಿನಲ್ಲಿ @5g/5ml ನೊಂದಿಗೆ ಸಿಂಪಡಿಸಿ. ತಡವಾಗಿ ಬಿತ್ತಿದ ಬೆಳೆಗೆ (95-100 ದಿನಗಳು) ಫೆನ್‌ಪ್ರೊಪಾಥ್ರಿನ್ @1 ಮಿಲಿ/ ಲೀಟರ್ ನೀರಿನಲ್ಲಿ (ಗುಲಾಬಿ ಕಾಯಿ ಕೊರಕದ ವಿರುದ್ಧ) ಸಿಂಪಡಿಸಿ. ಎಲೆ ಕೆಂಪಾಗುವ ಸಮಸ್ಯೆಯನ್ನು ಪರಿಹರಿಸಲು 1% 19:19:19 (1 ಲೀಟರ್ ನೀರಿನಲ್ಲಿ 10 ಗ್ರಾಂ) + 1% $MgSO_4$ (1 ಲೀಟರ್ ನೀರಿನಲ್ಲಿ 10 ಗ್ರಾಂ) ಸಿಂಪಡಿಸಿ ಮತ್ತು ಸೂಕ್ಷ್ಮ ಪೋಷಕಾಂಶವನ್ನು 1 ಲೀಟರ್ ನೀರಿನಲ್ಲಿ @ 4g ಅಥವಾ ಮಿಲಿ ಸಿಂಪಡಿಸಿ ಹಾಗೆಯೇ ತಡವಾಗಿ ಬಿತ್ತಿದ ಬೆಳೆಗೆ 13-0-45 (ಪೊಟ್ಯಾಸಿಯಮ್ ನೈಟ್ರೇಟ್) @10 ಗ್ರಾಂ ಅನ್ನು ಎಲೆಗಳ ಮೇಲೆ ಸಿಂಪಡಿಸಿ. ಹೊಲಗಳಿಂದ ರೋಗಗ್ರಸ್ತ ಕಾಯಿಗಳು ಮತ್ತು ಬೆಳೆ ಅವಶೇಷಗಳನ್ನು ಸಂಗ್ರಹಿಸಿ ನಾಶಪಡಿಸಬೇಕು.

| ಭಾ. ಕೃ. ಅ. ಪ. – ಕೇಂದ್ರೀಯ ಹತ್ತಿ ಸಂಶೋಧನಾ ಸಂಸ್ಥೆ, ನಾಗಪುರ | |
|---|---|
| ಕನ್ನಡ ಅನುವಾದ | |
| **ಡಾ. ನೀಲಕಂಠ ಸ. ಹಿರೇಮನಿ ಮತ್ತು ಡಾ ಪ್ರಭುಲಿಂಗ ಟಿ.** | |